



## ಸಿದ್ಧಗಂಗಾ ಅನ್ನಗಂಗಾ!

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ'ದಲ್ಲಿ ಶಿವಕುಮಾರ ಸ್ವಾಮೀಜಿಯವರ ಹುಟ್ಟುಹಬ್ಬದ ವಿಶೇಷ ಸಂಚಿಕೆ ನೋಡಿ ಸಾರ್ಥಕತೆಯ ಅನುಭೂತಿ ಮೂಡಿತು. ತುಮಕೂರಿನ ಶ್ರೀಮಠದ ಬಗ್ಗೆ ಸಚಿತ್ರ ವಿವರಣೆ ನೀಡಲಾಯಿತು. ತ್ರಿವಿಧ ದಾಸೋಹದಿಂದ ಪ್ರಸಿದ್ಧಿಪಡೆದಿದ್ದ ಶ್ರೀಗಳನ್ನು ಭೋಜನ ಕಾರ್ಯಕ್ರಮದಲ್ಲಿ ಪರಿಚಯಿಸುವ ಮೂಲಕ 'ಅನ್ನ' ದೈವ ಎನ್ನುವುದನ್ನು ಮನಮುಟ್ಟುವಂತೆ ನಿರೂಪಿಸಲಾಯಿತು. ಸ್ವಾಮೀಜಿ ಮತ್ತು ಮಠದ ಬಗ್ಗೆ ಮಾಹಿತಿ ನೀಡಿದ ಸಿಹಿಕಹಿ ಚಂದ್ರು ಮತ್ತು ಸ್ಟಾರ್ ಸುವರ್ಣ ವಾಹಿನಿಗೆ ಧನ್ಯವಾದಗಳು.

—ಉಷಾ ನಾಗರಾಜ್

ವಾರದ ಪತ್ರ

## ಉಲ್ಟಾ ಪ್ರತಿಜ್ಞೆ

ಉಮಾಶ್ರೀ ಹಾಗೂ 'ಸಿಲ್ಲಿ ಲಲ್ಲಿ' ಖ್ಯಾತಿಯ ಲಲಿತಾ ಅವರ ಮನೋಜ್ಞ ಅಭಿನಯದಿಂದ ಝೀ ವಾಹಿನಿಯ 'ಪುಟ್ಟಕ್ಕನ ಮಕ್ಕಳು' ಗಮನಸೆಳೆಯುತ್ತಿದೆ. ಇತ್ತೀಚೆಗೆ ಕಾಳಿಯ ಪ್ರತಿಜ್ಞೆಯೂ ಮನ ಸೆಳೆಯಿತು.

ಪಂಚಾಯ್ತಿಯಲ್ಲಿ ತನಗೆ ಉಂಟಾದ ಅವಮಾನಕ್ಕೆ ಕಾರಣನಾದವನನ್ನು ಕಂಡುಹಿಡಿಯುವ ತನಕ ಗಡ್ಡ ಮೀಸೆ ಬಿಡಲ್ಲ ಎಂದು ಕಾಳಿ ಸಮೃದ್ಧವಾಗಿ ಬೆಳೆದಿದ್ದ ತನ್ನ ಗಡ್ಡ ಮೀಸೆ ಬೋಳಿಸಿಕೊಳ್ಳುತ್ತಾನೆ. ಸೇಡು ತೀರುವ ತನಕ ಅಥವಾ ಹರಕೆ ಈಡೇರುವ ತನಕ ಗಡ್ಡ ಮೀಸೆ ಬೋಳಿಸುವುದಿಲ್ಲ ಅನ್ನುವ ಜನರನ್ನೇ ನೋಡಿದ್ದ ನಮಗೆ ಇದೊಂದು ವಿಶಿಷ್ಟ ಪ್ರತಿಜ್ಞೆ ಅನ್ನಿಸಿತು. ತನ್ನ ರೌಡಿ ಪಟ್ಟಕ್ಕೆ ಕುತ್ತು ಬಂದ ಮೇಲೆ ಅವು ಇದ್ದರೆಷ್ಟು ಬಿಟ್ಟರೆಷ್ಟು ಎಂದು ಕಾಳಿ ಹಾಗೆ ಮಾಡಿರಬಹುದು. ಆದರೆ ಸೇಡು ತೀರಿಸಿಕೊಂಡ ಮೇಲೆಯೇ ಮೀಸೆ ತೆಗೆಸಿದ್ದರೆ ಚಾಲ್ತಿಯಲ್ಲಿರುವ ಸಂಪ್ರದಾಯ ಪಾಲಿಸಿದಂತಾಗುತ್ತಿತ್ತು ಅಲ್ಲವೇ? ಸೇಡು ತೀರುವ ತನಕ ಮುಡಿಯನ್ನು ಕಟ್ಟುವುದಿಲ್ಲ ಎಂದಿದ್ದ ಪಾಂಚಾಲಿ ಮತ್ತು ಚಾಣಕ್ಯ ಏನಾದರೂ ಈ ಪ್ರತಿಜ್ಞೆಯನ್ನು ನೋಡಿದ್ದರೆ ಅವರ ಪ್ರತಿಕ್ರಿಯೆ ಹೇಗಿರುತ್ತಿತ್ತು?

—ವಾ. ಮುರಳೀಧರ, ತೀರ್ಥಹಳ್ಳಿ

## ಮಾಧ್ಯಮ ಮಧ್ಯಮ

ಕನ್ನಡದ ಸುದ್ದಿವಾಹಿನಿಗಳು ಕ್ಷುಲ್ಲಕ ವಿಷಯಗಳನ್ನೇ ಬಂಡವಾಳ ಮಾಡಿಕೊಳ್ಳುತ್ತಿವೆ. ದಿನವಿಡೀ ಅದೇ ಅದೇ ಸಂಗತಿಗಳನ್ನು ಎಳೆದು ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಿಸುತ್ತಿವೆ. ಸಮಾಜದ ಸಾಮರಸ್ಯ ಕದಡಲು ಈ ವಾಹಿನಿಗಳು ಕೆಲಸ ಮಾಡುತ್ತಿವೆಯೇ ಎನ್ನುವ ಅನುಮಾನ ಹುಟ್ಟುತ್ತದೆ.

ಮೇಕೆದಾಟು ಮತ್ತು ರಷ್ಯಾ—ಉಕ್ರೇನ್ ಯುದ್ಧದ ವಿಶ್ಲೇಷಣೆ, ನಂತರ ಹಿಜಾಬ್ ಕುರಿತಾದ ವರದಿಗಳು ಸಾಮರಸ್ಯ ಕದಡುವಂತೆ ಇದ್ದವು. ಜನಪ್ರತಿನಿಧಿಗಳು, ವಿಚಾರವಂತರು ಮತ್ತು ಧಾರ್ಮಿಕ ಮುಖಂಡರ ಹೇಳಿಕೆಗಳನ್ನು ವಿನಾಕಾರಣ ವೈಭವೀಕರಿಸಲಾಯಿತು. ಅವರ ಕಿಡಿನುಡಿಗಳನ್ನೇ ದಿನವಿಡೀ ಪ್ರಸಾರ ಮಾಡುವ ಔಚಿತ್ಯವಾದರೂ ಏನು?

ಎಲ್ಲವೂ ಮುಗಿದು ರಾಜ್ಯದ ವಿದ್ಯಮಾನಗಳ ಬಗ್ಗೆ ವಿವರ ಸಿಗಬಹುದು ಎಂದು ನಿರೀಕ್ಷಿಸುತ್ತಿದ್ದ ವೀಕ್ಷಕರಿಗೆ ಮತ್ತೆ ನಿರಾಸೆ ಆಗಿದೆ. ಹಲಾಲ್—ಜಟ್ಕಾ ಎಂಬ ಪ್ರಾಣಿವಧೆ ಚರ್ಚೆ ಮುನ್ನೆಲೆಗೆ ಬಂದಿತು. ಇದರ ಬೆನ್ನಿಗೆ ಧರ್ಮ ಕೇಂದ್ರಿತ ಸಂಗತಿಗಳೇ ಸರಣಿಯಂತೆ ಸುದ್ದಿಯಾಗುತ್ತಿವೆ. ಇಂತಹ ಸಂಗತಿಗಳಿಗೆ ವೇದಿಕೆ ಕಲ್ಪಿಸಿದರೆ ಸಮಾಜದ ಸಾಮರಸ್ಯಕ್ಕೆ ಧಕ್ಕೆ ಬರುತ್ತದೆ ಎಂದೇಕೆ ಮಾಧ್ಯಮ ಯೋಚಿಸುವುದಿಲ್ಲ. ಸೌಹಾರ್ದ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಮಾಧ್ಯಮಗಳೂ ತಮ್ಮ ಬದ್ಧತೆಯನ್ನು ತೋರಿಸಬೇಕು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಇದು ನ್ಯಾಯವೇ?

ಕಲರ್ಸ್ ಕನ್ನಡದ 'ಲಕ್ಷಣ'ದಲ್ಲಿ ಶ್ರೀಮಂತ ಕುಟುಂಬದ ಮೌರ್ಯ ಫುಟ್‌ಪಾತ್‌ನಲ್ಲಿ ಮಲಗಿದವರ ಮೇಲೆ ವಾಹನ ಓಡಿಸುತ್ತಾನೆ. ಆತನ ತಾಯಿ ಕೇಸ್ ಮುಚ್ಚಿಹಾಕಿಸುತ್ತಾಳೆ. 'ರಾಮಾಚಾರಿ'ಯಲ್ಲಿ ನಾಯಕಿಯ ತಾಯಿ ಮಾನ್ಯತಾ, ಸೆಕ್ಯೂರಿಟಿ ಗಾರ್ಡ್‌ಗೆ ಕಾರನ್ನು ಗುದ್ದಿ ಓಡಿಸಿಕೊಂಡು ಹೋಗುತ್ತಾಳೆ. ಪೊಲೀಸ್ ಅವಳ ಹಣಬಲಕ್ಕೆ ಮೆತ್ತಗಾಗಿದ್ದಾರೆ. ಶ್ರೀಮಂತರು ಏನೇ ತಪ್ಪು ಮಾಡಿದರೂ ಪ್ರಕರಣವನ್ನು ಮುಚ್ಚಿಹಾಕುತ್ತಾರೆ. ಕಾನೂನು ಇಷ್ಟು ಬಲಹೀನ ಆಗಿದೆಯೇ? ಬಡವರ ಪ್ರಾಣ ಲೆಕ್ಕಕ್ಕೆ ಇಲ್ಲವೇ? ಧಾರಾವಾಹಿಗಳಲ್ಲೇನೋ ಪರಿಹಾರ ಸಿಗಬಹುದೇನೊ? ಆದರೆ ವಾಸ್ತವದಲ್ಲಿ?

—ಮೇಘನಾ ರಘುನಂದನ್, ಹೂವಿನಹಡಗಲಿ

## ಔಚಿತ್ಯದ ಸಂದೇಶ

ಕಲರ್ಸ್ ಕನ್ನಡದ 'ಗಿಣಿರಾಮ'ದ ಇತ್ತೀಚಿನ ಸಂಚಿಕೆಗಳಲ್ಲಿ ಯುಗಾದಿ ಆಚರಣೆಯ ಬಗ್ಗೆ ದೇಶಪಾಂಡೆ ಹಬ್ಬದ ವಿವರಗಳನ್ನು ಸೊಗಸಾಗಿ ನೀಡಿದರು. ಅವರ ಮಾತುಗಳಲ್ಲಿ ಹಬ್ಬದ ಹಿನ್ನೆಲೆ ಮತ್ತು ಅದರ ಔಚಿತ್ಯದ ಕುರಿತು ಯುವಜನಾಂಗಕ್ಕೆ ಒಳ್ಳೆಯ ಸಂದೇಶವಿತ್ತು ಎನ್ನುವುದು ನನ್ನ ಭಾವನೆ.

'ಕನ್ನಡತಿ'ಯ ಮೂಲಕ ಹೆಣ್ಣು ಕೇಳುವ ಶಾಸ್ತ್ರವನ್ನು ಹೇಗೆ ಮಾಡಬೇಕು ಎಂಬುದನ್ನು ಅಮ್ಮಮ್ಮ ಪಾತ್ರದ ಮೂಲಕ ಹೇಳಿಸಿರುವುದೂ ಚೆನ್ನಾಗಿತ್ತು.

—ಕಮಲಾದೇವಿ ರಾಜಶೇಖರ ಹಳ್ಳೂರ್

## ಆ ಮೂವರ ಗೆಲುವು...

ಕಲರ್ಸ್‌ನ 'ನನ್ನಮ್ಮ ಸೂಪರ್ ಸ್ಟಾರ್' ಗ್ರಾಂಡ್ ಫಿನಾಲೆ ಅದ್ಭುತವಾಗಿತ್ತು. ಅಮ್ಮಂದಿರು—ಮಕ್ಕಳ ಆಟ ಪ್ರಾರಂಭದಿಂದಲೂ ರಸದೌತಣ ಬಡಿಸಿದೆ. ಅದರಲ್ಲೂ ವಂಶಿಕಾ ಮೊದಲ ಎಪಿಸೋಡಿನಿಂದ ಕೊನೆಯವರೆಗೂ ತನ್ನ ಜನಪ್ರಿಯತೆ ಕಾಯ್ದುಕೊಂಡಳು. 'ಪರಂಪರಮ್ ಪರಮ ಸುಂದರಿ' ಡಾನ್ಸ್ ಚೆನ್ನಾಗಿತ್ತು. ಅವರ ಅಮ್ಮ ಯಶಸ್ವಿನಿ, ಮಗಳ ಸಮಕ್ಕೆ ತಮ್ಮ ಪ್ರತಿಭೆಯನ್ನು ತೋರಿಸಿ ಗೆದ್ದಿದ್ದಾರೆ. ವಂಶಿ, ಆರ್ಯ ಮತ್ತು ರೋಹಿತ್ ಯಾವಾಗಲೂ ಜೊತೆಯಾಗಿ ಇರುತ್ತಿದ್ದುದು ಹಾಗೂ ಸ್ಪರ್ಧೆಯಲ್ಲೂ ಈ ಮೂವರು ವಿಜೇತರಾಗಿರುವುದು ವಿಶೇಷ.

—ಸೀತಾ ಕೇಶವ, ಸಿಡ್ನಿ

## ಅವಾಸ್ತವದ ಕನ್ನಡತಿ

ಕಲರ್ಸ್‌ನ 'ಕನ್ನಡತಿ'ಯಲ್ಲಿ ಇವೆಂಟ್ ಮ್ಯಾನೇಜ್‌ಮೆಂಟ್ ಎಕ್ಸಿಕ್ಯೂಟಿವ್ ಆಗಿ ಪ್ರವೇಶ ಮಾಡಿದ ವರೂಧಿನಿ, ಆ ಕುಟುಂಬದ ಆಂತರಿಕ ವ್ಯವಹಾರದಲ್ಲಿ ಕೈ ಆಡಿಸುವುದನ್ನು ಅಮ್ಮಮ್ಮ ಮತ್ತು ಹರ್ಷ ಸಹಿಸಿಕೊಳ್ಳುವುದು ವಿಚಿತ್ರ ಎನಿಸುತ್ತದೆ.

ಹಸಿರು ಪೇಟೆಯ ಭುವಿಯ ತಾಯಿಮನೆಗೆ ಕರೆಯದೇ ಬಂದ ಅತಿಥಿ ಆಗಿದ್ದಾಳೆ. ಅಲ್ಲಿಯೂ ಪ್ರತಿ ವ್ಯವಹಾರದಲ್ಲಿ ಮೂಗು ತೂರಿಸುವುದು ಸಭ್ಯತೆಯಲ್ಲ. ಕರೆಯದೇ ಬಂದ ಅತಿಥಿಗೆ ಅತೀವ ಸ್ವಾತಂತ್ರ್ಯವನ್ನು ನೀಡಿರುವುದು ದೊಡ್ಡ ತಪ್ಪು. ಹರ್ಷನನ್ನು ಮದುವೆಯಾಗುವುದು ತನ್ನ ಹಕ್ಕು ಮತ್ತು ಯಾರಿಂದಲೂ ಅದನ್ನು ತಪ್ಪಿಸಲು ಸಾಧ್ಯವೇ ಇಲ್ಲ ಎಂದು ಭಾವಿಸಿದಂತೆ ವರ್ತಿಸುತ್ತಾಳೆ.

ಅಂತಹವಳನ್ನು ಮನೆಯಿಂದ ತೊಲಗಾಚೆ ಎಂದು ಕಳಿಸದಿರುವುದು ಮತ್ತೊಂದು ತಪ್ಪು. ಅಮ್ಮಮ್ಮ ಮತ್ತು ಹರ್ಷರಂತಹ ಕಾರ್ಪೊರೇಟ್ ಕುಳಗಳಿಗೆ ಇಷ್ಟೂ ತಿಳಿಯದೆ ಇರುವುದು ಶೋಚನೀಯ. ಬೆರಳು ತೋರಿಸಿದರೆ ಮುಂಗೈ ನುಂಗುವ ಈ ಕಾಲದಲ್ಲಿ ಭುವಿಯ ಅತಿ ವಿನಯ ಮತ್ತು ಆದರ್ಶ ಬೇಸರವನ್ನು ಹುಟ್ಟಿಸುತ್ತದೆ. ತಾನು ಪ್ರೀತಿಸಿದವನನ್ನು ಹೇಗಾದರೂ ಪಡೆಯಲೇಬೇಕೆಂದು ಹಾದಿ ಬೀದಿ ಕಾಳಗವಾಗುವ ಈ ಕಾಲದಲ್ಲಿ ಭುವಿ ದೃಢತೆ ತೋರಿಸದಿರುವುದು ತೀರಾ ಆಶ್ಚರ್ಯ. ಕಥೆಗಾರ ವಾಸ್ತವದ ಹಳಿ ತಪ್ಪಿದಂತೆ ಕಾಣುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು